2

# ಪ್ರಶ್ನೆ:

# “ಒಬ್ಬ ದೇವರು ಇದ್ದರೆ, ಅಷ್ಟು ಶ್ರಮೆಯನ್ನು ಆತನು ಯಾಕೆ ಬಿಡುತ್ತಾನೆ?”

## ಉತ್ತರ:

ಪೇರುವಿನಲ್ಲಿ ಭೂಮಿ ಕುಸಿಯಿತು ಮತ್ತು ಕುಸಿದು ಬೀಳುತ್ತಿದ್ದ ಮಣ್ಣಿನಲ್ಲಿ ಸಾವಿರಾರು ಜನರು ಹೂಣಲ್ಪಟ್ಟು ಸತ್ತು ಹೋದರು. ಮೆಕ್ಸಿಕೋದಲ್ಲಿ, ಭೂಕಂಪವು ಸಾವಿರಾರು ಜನರನ್ನು ಕೊಂದು ಹಾಕಿತು. ಪೂರ್ವ ಪಾಕಿಸ್ತಾನದಲ್ಲಿ, ಚಂಡಮಾರುತ ಮತ್ತು ಸಮುದ್ರವು ಗ್ರಾಮಗಳಲ್ಲಿ ಹೊಕ್ಕು ನೂರಾರು ಸಾವಿರಾರು ಜನರನ್ನು ಕೊಂದವು. ವಿಯೆಟ್ನಾಮ್‌ದಲ್ಲಿ, ಮುಗ್ಧ ಮಹಿಳೆಯರು ಮತ್ತು ಮಕ್ಕಳು ಯುದ್ಧದ ದೌರ್ಜನ್ಯಗಳಲ್ಲಿ ಸತ್ತು ಹೋದರು ಆಸ್ಟ್ರೇಲಿಯಾದಲ್ಲಿ, ಎಂಟು ವರ್ಷ ವಯಸ್ಸಿನ ವಿಕ್ಕಿ ಕಾಣೆಯಾ ದಳು ಮತ್ತು ಒಂದು ವರ್ಷದ ನಂತರ ಆಕೆಯ ಕೊಳೆತ ಹೆಣ ದೊರೆಯಿತು; ಆಕೆ ಆಕ್ರಮಣಕ್ಕೊಳಪಟ್ಟು ಕೊಲೆಮಾಡಲ್ಪಟ್ಟಿದ್ದಳು, ಇನ್ನೊಬ್ಬ ಮನುಷ್ಯನ ಅಮಾನುಷ ಕಾಮುಕತೆಗೆ ಬಲಿಯಾಗಿದ್ದಳು.

ದೇವರು ಇದ್ದಾರೆ, ಜಗತ್ತಿನಲ್ಲಿ ಅಷ್ಟು ಶ್ರಮೆಯನ್ನು ಆತನು ಯಾಕೆ ಬಿಡುತ್ತಾನೆ? ಯೋಚಾನಪರ ಜನರು ಶ್ರಮೆಪಡುವ ಮಗುವನ್ನು, ಯುದ್ಧದ ಭಯಾನಕತೆಗಳನ್ನು ನೋಡುತ್ತಾರೆ ಮತ್ತು ಹೀಗೆ ತೀರ್ಮಾನಿಸಿಕೊಳ್ಳುತ್ತಾರೆ: “ನಿಶ್ಚಯವಾಗಿಯು ದೇವರು ಇರುವುದಿಲ್ಲ. ಇದ್ದರೆ, ಆತನು ಅಂಥ ಶ್ರಮೆಯನ್ನು ಬಿಡುತ್ತಿರಲಿಲ್ಲ.”

ಬೈಬಿಲು ಈ ಪ್ರಶ್ನೆಯೊಂದಿಗೆ ವ್ಯವಹರಿಸುತ್ತದೆ. “ನೀತಿವಂತನು ಯಾಕೆ ಶ್ರಮೆ ಪಡುತ್ತಾನೆ?” ಎಂದು ಯೋಬನ ಪುಸ್ತಕವು ಪ್ರಶ್ನಿಸುತ್ತದೆ. ಕೀರ್ತನೆ 73ರಲ್ಲಿ ಕೀರ್ತನೆಗಾರನು ದುಷ್ಟನು ಸಮೃದ್ಧಿ ಹೊಂದುವದನ್ನು ಗಮನಿಸಿದನು ಮತ್ತು ನೀತಿಯಿಂದ ಜೀವಿಸ ಲಿಕ್ಕೆ ಬಯಸುವುದು ನಿರುಪಯೋಗವಾದದ್ದಾಗಿದೆ ಎಂದು ತೀರ್ಮಾನಿಸಿ ಕೊಂಡನು (ವಚನಗಳು 3, 12, 13). “ದಷ್ಟನು ತನಗಿಂತ ಯೋಗ್ಯನನ್ನು ನುಂಗಿ ಬಿಡುವಾಗ ಏಕೆ ಸುಮ್ಮನಿದ್ದೀ?” ಎಂದು ಹಬಕ್ಕೂಕನು ದೇವರನ್ನು ಕೇಳಿದನು (ಹಬಕ್ಕೂಕ 1:13). ಇಲ್ಲವೇ ಯಾರೋ ಹೇಳಿದಂತೆ, “ದುಷ್ಟತನವು ರೇಗುವಾಗ ದೇವರು ಯಾಕೆ ಅಷ್ಟು ಮೌನವಾಗಿರುತ್ತಾನೆ?”

ಹೊಸ ಒಡಂಬಡಿಕೆಯಲ್ಲಿ, ಹುಟ್ಟು ಕುರಡನಾಗಿ ಜನಿಸಿದ ಒಬ್ಬನ ಬಗ್ಗೆ ಯೇಸುವಿಗೆ ಹೀಗೆ ಕೇಳಲ್ಪಟ್ಟಿತು: “ಬೋಧಕನೇ, ಇವನು ಕುರುಡನಾಗಿ ಹುಟ್ಟಿರುವದಕ್ಕೆ ಯಾರು

ಪಾಪ ಮಾಡಿದರು?" (ಯೋಹಾನ 9:2). ದುರ್ದೆಶೆ ಬರುವಾಗ ನಾವು ಬಹಳ ಸಲ, "ಯಾರು ಪಾಪ ಮಾಡಿದರು?" ಎಂದು ಪ್ರಶ್ನಿಸುತ್ತೇವೆ.

ಉತ್ತರವು ಯಾವುದು? ಒಬ್ಬ ಮನುಷ್ಯನು ಹುಟ್ಟು ಕುರುಡನಾಗಿ ಯಾಕೆ ಹುಟ್ಟಬೇಕು? ಹೆಚ್ಚು ನೀತಿಯುಳ್ಳ ದೇಶವನ್ನು ದುಷ್ಟದೇಶವು ಜಯಿಸುವಂತೆ ದೇವರು ಯಾಕೆ ಬಿಡಬೇಕು? ದುಷ್ಟರು ಯಾಕೆ ಸಮೃದ್ಧಿಗೊಳ್ಳಬೇಕು? ನೀತಿವಂತನು ಯಾಕೆ ಶ್ರಮೆಪಡಬೇಕು?

ಎಲ್ಲಾ ಉತ್ತರಗಳನ್ನು ನಾವು ತಿಳಿಯದಿದ್ದರೂ, ನಮ್ಮ ವಿಶ್ವಾಸವನ್ನು ಬಲಪಡಿಸುವ ಕೆಲವು ಉತ್ತರಗಳು ಲಭ್ಯವಿರುತ್ತವೆ.

## ನಿರ್ದೋಷಿಯು ಯಾಕೆ ಶ್ರಮೆ ಪಡಬೇಕು?

ನಿರ್ದೋಷಿಯು ಯಾಕೆ ಶ್ರಮೆ ತಾಳುವನು ಎಂಬುದನ್ನು ಅರ್ಥಮಾಡಿ ಕೊಳ್ಳುವುದು ನಿಜವಾದ ಸಮಸ್ಯೆಯಾಗಿದೆ. ದುಷ್ಟ ಜನರು ಶ್ರಮೆ ಹೊಂದುವಾಗ ನಾವು ದೂರುವುದಿಲ್ಲ. "ದೇವರು ಇದ್ದರೆ, ಹಿಟ್ಲರನು ಶ್ರಮೆಹೊಂದುವಂತೆ ಯಾಕೆ ಬಿಟ್ಟನು?" ಎಂದು ಯಾರಾದರೂ ಹೇಳಿದ್ದನ್ನು ನಾನೆಂದೂ ಕೇಳಿಸಿಕೊಂಡಿರುವದಿಲ್ಲ.

ನಿರ್ದೋಷಿಯು ಶ್ರಮೆ ಹೊಂದುವ ಸಮಸ್ಯೆಯು ಭಿನ್ನವಾದ್ದದ್ದಾಗಿದೆ. ಅದನ್ನು ನ್ಯಾಯದ ಮಾತುಗಳಲ್ಲಿ ಯೋಚಿಸುತ್ತೇವೆ ಮತ್ತು ಯಥಾರ್ಥರು ದಂಡಿಸಲ್ಪಡುವುದು ಅನ್ಯಾಯವೆಂಬಂತೆ ತೋರುತ್ತದೆ. ನೀತಿವಂತನು ಯಾಕೆ ಶ್ರಮೆ ಹೊಂದುವನು? ಅನೇಕ ಸಂಗತಿಗಳು ಒಳಗೊಂಡಿರುತ್ತವೆ.

*ಮೊದಲನೆಯದು, ಶ್ರಮೆಹೊಂದುವದರಲ್ಲಿ ಕೆಲವೊಂದು ಮೌಲ್ಯವಿರುವದರಿಂದ ನಿರ್ದೋಷಿಯುಶ್ರಮೆಪಡಬಹುದು.* "ಕಷ್ಟಾನುಭವವು ಹಿತಕರವಾಯಿತು; ಅದರಿಂದಲೇ ನಿನ್ನ ನಿಬಂಧನೆಗಳನ್ನು ಕಲಿತೆನು" (ಕೀರ್ತನೆ 119:71; ಹೋಲಿಸು ಇಬ್ರಿಯ 12:11) ಎಂದು ಕೀರ್ತನೆಗಾರನು ಬರೆದನು. ಕೆಲವು ಸಲ, ಆರೋಗ್ಯಕ್ಕಿಂತ ಅಸ್ವಸ್ಥತೆಯು ನಮಗೆ ಹೆಚ್ಚು ಉತ್ತಮವಾದದ್ದಾಗಿರಬಹುದು ಮತ್ತು ಸುಖಕ್ಕಿಂತ ನೋವು ಹೆಚ್ಚು ಉತ್ತಮ ವಾದದ್ದಾಗಿರಬಹುದು. ಶ್ರಮೆಯು ಗುಣವನ್ನು ಬೆಳೆಸಬಹುದು, ಸಹಾನುಭೂತಿಯನ್ನು ಪ್ರೇರಿಸಬಹುದು ಪ್ರಾಪಂಚಿಕತೆಯನ್ನು ಕಡಿಮೆಗೊಳಿಸಬಹುದು ಮತ್ತು ನಮ್ಮನ್ನು ದೇವರ ಕಡೆಗೆ ನಡಿಸಬಹುದು. ಅನಾನುಕೂಲತೆಯುಳ್ಳವರು ತಮ್ಮ ಅನಾನುಕೂಲತೆಗಳಿದ್ದರೂ ಮಹಾಸಾಧನೆಗಳನ್ನು ಮಾಡಿದ್ದರ *ಬಗ್ಗೆ ನಾವು* ಕೇಳಿದ್ದೇವೆ. ತಮ್ಮ ಅನಾನುಕೂಲತೆಗಳ ಕಾರಣದಿಂದ ಅವರು ಪೂರೈಸಿದ ಮಹಾಸಂಗತಿಗಳ *ಬಗ್ಗೆ ನಾವು* ಯೋಚಿಸತಕ್ಕದ್ದು. ಹೆಲೆನ್ ಕೆಲ್ಲರ, ಗ್ರಂಥ ಕರ್ತಳೂ ಭಾಷಣಕಾರಳೂ ಆಗಿದ್ದವಳು ಈ ಶತಮಾನದಲ್ಲಿ ಅತೀ ದೊಡ್ಡ ಪ್ರೇರ ಣಾತ್ಮಕ ವ್ಯಕ್ತಿಗಳಲ್ಲಿ ಒಬ್ಬಳಾಗಿದ್ದಳು. ಬಾಲ್ಯದಲ್ಲಿಯೇ ಕುರುಡಿಯೂ, ಕಿವುಡಿಯೂ ಮತ್ತು ಮೂಕಿಯೂ *ಆಗಿದ್ದರಿಂದ* ಅಷ್ಟೆ ಅಲ್ಲ, ಈ ಅಂಗವಿಕಲತೆಗಳಿಂದಲೂ ಹಾಗೆ ತಿಳಿಯಲ್ಪಟ್ಟಳು. ಶ್ರಮೆಯು ಹೆಚ್ಚು ಉತ್ತಮ ಗುಣಕ್ಕೆ ಬಾಗಿಲಂತೆ ತಿಳಿದು ಕೊಳ್ಳತಕ್ಕದ್ದು.

*ಎರಡನೆಯದು, ಅವರು ಪಾಪದ ಪರಿಣಾಮವಾಗಿ ಶ್ರಮೆಪಡಬಹುದು.* ಪಾಪದ ಕಾರಣದಿಂದ ಶ್ರಮೆಯು ಲೋಕದೊಳಗೆ ಬಂದಿತು, ಮತ್ತು ಪಾಪದ ಕಾರಣದಿಂದ ಮಾನವ ಕುಲಕ್ಕೆ ಶ್ರಮೆಯು ಬಾಧೆಯಾಗಿ ಮುಂದುವರಿಯುತ್ತದೆ. ಯೋಬ 4:8ರಲ್ಲಿ, "ನಾನು ನೋಡಿರುವ ಮಟ್ಟಿಗೆ ಅಧರ್ಮವನ್ನು ಉತ್ತು ಕೇಡನ್ನು ಬಿತ್ತುವವರು ಕೇಡನ್ನೇ ಕೊಯ್ಯುವರು" ಎಂದು ಎಲೀಫಜನು ಹೇಳಿದಾಗ ಸಾಮಾನ್ಯ ಸತ್ಯವನ್ನು ಹೇಳಿದ್ದಾನೆ. ಹೊಸ ಒಡಂಬಡಿಕೆಯು ಒಪ್ಪಿಕೊಳ್ಳುತ್ತದೆ: "ಮೋಸ ಹೋಗಬೇಡಿರಿ; ದೇವರು

ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು" (ಗಲಾತ್ಯ 6:7). ದುಷ್ಟರು, ಈ ಜೀವನದಲ್ಲಿ ಅಲ್ಲದಿದ್ದರೂ ಮುಂದಿನ ಲೋಕದಲ್ಲಿ, ತಮ್ಮ ಪಾಪಗಳ ಕಾರಣಕ್ಕಾಗಿ ಶ್ರಮೆ ಹೊಂದುವರು (ರೋಮಾಪುರ 6:23).

ನಿರಪರಾಧಿಯು ಅಪರಾಧಿಯೊಂದಿಗೆ ಶ್ರಮಪಡುವುದು ಪಾಪದ ದುಃಖಕರವಾದ ಸಂಗತಿಯಾಗಿದೆ. ದೇವರು ತಾನು ಮೂರನೆಯ, ನಾಲ್ಕನೆಯ ಸಂತತಿಯವರೆಗೆ ತಂದೆಗಳ ಅಪರಾಧವನ್ನು ಅವರ ಮಕ್ಕಳ ಮೇಲೆ ಹೋರಿಸುವೆನೆಂದು ಧರ್ಮೋಪದೇಶಕಾಂಡ 5:9ರಲ್ಲಿ ಹೇಳಿದಾಗ ಪಾಪದ ಸರಣಿ ಪ್ರತಿಕ್ರಿಯೆಯ ಬಗ್ಗೆ ಆತನು ಹೇಳಿದನು. ಈ ಉದಾಹರಣೆಗಳನ್ನು ಯೋಚಿಸಿರಿ: ಮೊದಲನೆದು ತಂದೆಯು ಕುಡುಕನಾಗಿದ್ದಾನೆ ಮತ್ತು ಅವನು ಕುಡುಕತನದ ಮತ್ತು ದುಷ್ಟತನದ ವಾತಾವರಣದಲ್ಲಿ ತನ್ನ ಮಕ್ಕಳನ್ನು ಬೆಳೆಸುತ್ತಾನೆ. ಅವನ ಪಾಪದ ಕಾರಣದಿಂದ ಎಷ್ಟು ಸಂತತಿಗಳು ಕಷ್ಟಪಡುವವರು? ರೋಗ, ಬಡತನ, ಅಕಾಲ ಮರಣ ಮತ್ತು ಮಾನಸಿಕ ರೋಗ ಅವನ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಪೀಡಿಸಬಹುದು. ಎರಡನೆಯದು, ಟೆಕ್ಸಾಸಿನ ಅಬಿಲೆನೆಯಲ್ಲಿ, ಒಬ್ಬ ಯುವಕನು ಮೂವರು ಜನರ ಮೇಲೆ ವಾಹನ ಹಾಯಿಸಿ ಕೊಂದನು; ಅವರಲ್ಲಿ ಫ್ರಾನ್ಸ್‌ದಲ್ಲಿ ಮಿಶನರಿಯಾಗಿ ಸೇವೆ ಮಾಡಿದ ಒಬ್ಬ ಸುಂದರ ಯುವತಿ ಇದ್ದಳು. ಮದ್ಯಪಾನ ಮಾಡುತ್ತಿದ್ದ ಈ ಯುವಕನು ಬಹಳ ವೇಗದಿಂದ ವಾಹನ ಚಲಿಸುತ್ತಿದ್ದನು. ಅವನಿಗೆ ವಾಹನ ಚಾಲಕನ ಲೈಸನ್ಸ ಸಹ ಇರಲಿಲ್ಲ ಆ ನಿರಪರಾಧಿ ಜನರು ಯಾಕೆ ಕಷ್ಟಪಡಬೇಕು? ಆ ಯುವಕನ ಪಾಪದ ಕಾರಣದಿಂದ! ಮೂರನೆಯದು, ಯುದ್ಧದಲ್ಲಿ, ಅಪರಾಧಿಗಳೊಂದಿಗೆ ಯಾಥಾರ್ಥರೂ ಶ್ರಮೆ ಪಡುತ್ತಾರೆ.

ಪಾಪವು ಶ್ರಮೆಯನ್ನು ಉಂಟು ಮಾಡುತ್ತದೆ - ಅಮಾಯಕರಿಗೂ ಅಪರಾಧಿಗಳಿಗೂ ಶ್ರಮೆ.

*ಮೂರನೆಯದು, ಮನುಷ್ಯನ ದುರ್ಬಲತೆ ಮತ್ತು ತಪ್ಪುಮಾಡಬಹುದಾದ ಕಾರಣದಿಂದ ನಿರಪರಾಧಿಯು ಶ್ರಮೆ ಪಡಬಹುದು.* ಪಾಪವು ಯಾವಾಗಲೂ ಶ್ರಮೆಗೆ ಕಾರಣವಾಗಿರುವುದು, ಆದರೆ ಎಲ್ಲಾ ಶ್ರಮೆಯು ಪಾಪದ ಪರಿಣಾಮವಾಗಿರುವದಿಲ್ಲ. ಕುರುಡು ಮನುಷ್ಯನ ಬಗ್ಗೆ ಪ್ರಶ್ನೆಗೆ ಉತ್ತರ ಕೊಟ್ಟಾಗ ಯೇಸು ಇದನ್ನು ವಿವರಿಸಿದನು: "ಇವನೂ ಪಾಪ ಮಾಡಲಿಲ್ಲ, ಇವನ ತಂದೆ ತಾಯಿಗಳು ಪಾಪ ಮಾಡಲಿಲ್ಲ; ದೇವರ ಕ್ರಿಯೆಗಳು ಇವನಲ್ಲಿ ತೋರಿ ಬರುವದಕ್ಕೆ ಇದಾಯಿತು" (ಯೋಹಾನ 9:3). ಎಲ್ಲಾ ಶ್ರಮೆಯು ಪಾಪದ ಪರಿಣಾಮವಾಗಿದೆ ಎಂದು ಯೆಹೂದ್ಯರಿಗೆ ತಪ್ಪಾದ ವಿಚಾರವಿತ್ತು, ಆದರೆ ಯೇಸುವು ಅದಲ್ಲ ಎಂದು ಹೇಳಿದನು.

ಕೆಲವು ಶ್ರಮೆಯು ಮನುಷ್ಯನ ತಪ್ಪಾದ ತೀರ್ಪಿನ ಪರಿಣಾಮವಾಗಿರುತ್ತದೆ. ಅವನು ಎಷ್ಟುದೂರ ಈಜ ಬಹುದೆಂದು ತಪ್ಪಾಗಿ ತಿಳಿದುಕೊಂಡು, ಅದರ ಪರಿಣಾಮವಾಗಿ ಮುಳುಗಿ ಹೋಗುತ್ತಾನೆ. ಯಾವುದೇ ಪಾಪ ಒಳಗೊಂಡಿರುವದಿಲ್ಲ - ಮಾನವ ತಪ್ಪುತಿಳುವಳಿಕೆಯು ಮಾನವನನ್ನು ಶ್ರಮೆಗೆ ನಡಿಸುತ್ತದೆ. ಆಸ್ಟ್ರೇಲಿಯಾದಲ್ಲಿ ಟ್ರೇನ್ ಅಪಘಾತವು ಒಂಭತ್ತು ಜನರನ್ನು ಕೊಂದುಹಾಕಿತು. ಅಪಘಾತಕ್ಕಾಗಿ "ಮಾನವ ತಪ್ಪು" ಕಾರಣವೆಂದು ದೂರಲ್ಪಟ್ಟಿತು. ಮಾನವ ತಪ್ಪು ತಿಳುವಳಿಕೆಯು ಅಪಘಾತಕ್ಕೆ ಕಾರಣವಾಗಿತ್ತು, ಮತ್ತು ತಪ್ಪಿನ ಕಾರಣದಿಂದ ನಿರಪರಾಧಿಗಳು ಶ್ರಮೆತಾಳಿದರು.

ಅಪರಿಪೂರ್ಣ, ಅಪಘಾತಕ್ಕೊಳಪಡಬಹುದಾದ ಜನರಿಂದ ತುಂಬಿಕೊಂಡಿರುವ ಈ ಲೋಕದಲ್ಲಿ ನಾವು ಜೀವಿಸಿರುವವರೆಗೆ, ನಿರಪರಾಧಿಗಳಿಗೂ ಹಾಗೆಯೇ ಅಪರಾಧಿಗಳಿಗೂ ನೋವು ಕೊಡುವ ತಪ್ಪುಗಳನ್ನು ನಾವು ನಿರೀಕ್ಷಿಸುತ್ತೇವೆ.

*ನಾಲ್ಕನೆಯದು, ಸೃಷ್ಟಿಯ ನಿಯಮಗಳೊಂದಿಗೆ ಸಂಘರ್ಷಣೆಯಲ್ಲಿ ಬರುವದರಿಂದ ನಿರಪರಾಧಿಗಳು ಶ್ರಮೆ ಹೊಂದುವರು.* ನಿಜವಾಗಿಯೂ ಸೃಷ್ಟಿಯ ನಿಯಮಗಳನ್ನು ನಾವು ಮುರಿಯುವದಿಲ್ಲ; ನಾವು ಅವುಗಳಿಗೆ ಅವಿಧೇಯರಾಗುವಾಗ, ಅವು ನಮ್ಮನ್ನು ಮುರಿಯುತ್ತವೆ! ಗುರುತ್ವಾಕರ್ಷಣ ಶಕ್ತಿಯನ್ನು ನಿಯಮವನ್ನು ಮುರಿಯಿರಿ, ಮತ್ತು ನೀವು ಮುರಿಯಲ್ಪಡುವಿರಿ!

ಆದರೆ ನಿರಪರಾಧಿಯು ಯಾಕೆ ಶ್ರಮೆ ತಾಳುವನು - ಭೂಕಂಪದಲ್ಲಿ ಮತ್ತು ಚಂಡಮಾರುತಗಳಲ್ಲಿ ನೇಮಿಸಲ್ಪಡುವಂತೆ ಇಲ್ಲವೇ ಕೊಲ್ಲಲ್ಪಡುವಂತೆ - ಅವರು ಸೃಷ್ಟಿಯ ಯಾವುದೇ ನಿಯಮವನ್ನು ನೇರವಾಗಿ ಮುರಿಯದೇ ಇರುವಾಗ ಯಾಕೆ ಶ್ರಮೆ ತಾಳುವರು?

ನಮ್ಮ ವಿಶ್ವಾಸವನ್ನು ದೈತ್ಯ ಯಂತ್ರದಂತೆ ಚಿತ್ರಿಸಿಕೊಳ್ಳಿರಿ. ಅದರ ಗಾಲಿಹಲ್ಲು ಚಕ್ರಗಳೂ ನಿರ್ಭಯದಿಂದ ಚಲಿಸುವವು. ನಿಯಂತ್ರಿತ ಸ್ಫೋಟಕಗಳು, ಅತೀ ವೇಗ ದಿಂದ ಇರುವ ಪಂಪಿಂಗ್ ಪಿಸ್ಟನ್‌ಗಳು ತಣ್ಣಗೆ ಮಾಡುವ ಮತ್ತು ಬಿಸಿಮಾಡುವ ಪದ್ಧತಿಗಳು ಇರುವವು. ನಂಬಲಾಗದಂಥ ಶಕ್ತಿಯು ಉತ್ಪಾದಿಸಲ್ಪಡುತ್ತದೆ, ಉಪಯೋಗಿಸಲ್ಪಡುತ್ತದೆ ಮತ್ತು ಹೊರಗೆ ಹಾಕಲ್ಪಡುತ್ತದೆ, ಎಲ್ಲವೂ ನಿಯಮಗಳ ಪ್ರಕಾರ ಸಂಭವಿಸುತ್ತದೆ. ಅವುಗಳಲ್ಲಿ ಕೆಲವನ್ನು ನಾವು ತಿಳಿದಿರುತ್ತೇವೆ ಮತ್ತು ಕೆಲವುಗಳನ್ನು ತಿಳಿದಿರುವದಿಲ್ಲ.

ಇಲ್ಲಿ ನಾವು ಈ ಯಂತ್ರದ *ಮುಖಾಂತರ* ನಡೆಯುತ್ತೇವೆ, ಸುತ್ತಲೂ ಅಲ್ಲ, ಅದರ ಮೇಲೆ ಅಲ್ಲ. ಕೆಲವು ನಿಯಮಗಳನ್ನು ನಾವು ತಿಳಿದಿರುವೆವು, ಕೆಲವು ಕ್ರಮಗಳನ್ನು, ಕೆಲವು ಗಂಡಾಂತರಗಳನ್ನು ತಿಳಿದಿರುವೆವು. ಆದುದರಿಂದ ಗೇರುಗಳನ್ನು ಇಲ್ಲವೇ ಪಿಸ್ಟನ್‌ಗಳನ್ನು ಬದಲಾಯಿಸುವುದನ್ನು ನಾವು ತಪ್ಪಿಸಿಕೊಳ್ಳುತ್ತೇವೆ. *ಆದರೆ ನಾವು ಅವೆಲ್ಲವುಗಳನ್ನೂ ತಿಳಿದಿರುವದಿಲ್ಲ, ಮತ್ತು ಎಲ್ಲಾ ಅಪಘಡಗಳನ್ನು ನಾವು ತಪ್ಪಿಸಲಾರೆವು!* ಅಂತಿಮವಾಗಿ, ನಾವು ತಿರುಗುವ ಗಾಳಿಗಳ ಮಾರ್ಗದಲ್ಲಿ ಬರುತ್ತೇವೆ ಇಲ್ಲವೇ ತಿಳಿಯದೇ ಆ ಚಕ್ರಗಳಲ್ಲಿ ಒಂದರಲ್ಲಿ ಕಾಲಿಡುತ್ತೇವೆ ಇಲ್ಲವೇ ಆ ಸ್ಫೋಟಗಳಲ್ಲಿ ಒಂದರ ಮಧ್ಯದಲ್ಲಿ ಕಂಡುಕೊಳ್ಳುತ್ತೇವೆ. ಅದು ಸಂಭವಿಸುವಾಗ, ನಾವು ಏನು ತಪ್ಪು ಮಾಡಿರುತ್ತೇವೆ? *ಏನೂ ಇಲ್ಲ - ವಿಶ್ವದ ಕಾರ್ಯಚರಣೆಯ ಮಾರ್ಗದಲ್ಲಿ ಒಳಗೊಂಡಿರುತ್ತೇವೆ!*

ಒಂದು ಭೂಕಂಪದಲ್ಲಿ ಕೊಲ್ಲಲ್ಪಟ್ಟ ಜನರಿಂದ ಮಾಡಲ್ಪಟ್ಟ ಒಂದೇ "ತಪ್ಪು" ಅದಾಗಿರುತ್ತದೆ. ಭೂಮಿಯೊಳಗಿರುವ ಒಂದು ದೈತ್ಯ ಒತ್ತಡವು ಭೂಮಿಯನ್ನು ಕಂಪಿಸುವಂತೇ ಮಾಡುತ್ತದೆ, ಮತ್ತು ಅವರು ಸುಮ್ಮನೇ ಸತ್ತು ಹೋಗುತ್ತಾರೆ ಯಾಕಂದರೆ ಸೃಷ್ಟಿಯ ಒತ್ತಡಗಳ ಕಾರ್ಯಚರಣೆಯು ಮಾರ್ಗದಲ್ಲಿ ಅವರು ಹಾಕಲ್ಪಡುತ್ತಾರೆ.

"ಜಗತ್ತನ್ನು ನಿಲ್ಲಿಸು. ನಾನು ಹೊರಟು ಹೋಗುತ್ತೇನೆ" ಎಂದು ಅಂಥ ಸಮಯಗಳಲ್ಲಿ ಹೇಳಲು ನಮಗೆ ಹಕ್ಕು ಇರುವುದೋ? ನಾವು ಸುರಕ್ಷಿತವಾಗಿರುವ ವರೆಗೆ ಬಿರುಗಾಳಿಯನ್ನು ನಿಲ್ಲಿಸಬಹುದೋ? ನಾವು ಮಾರ್ಗದಲ್ಲಿ ಇರಲಿ, ಬಿಡಲಿ, ಸೃಷ್ಟಿಯ ನಿಯಮಗಳು ಕಾರ್ಯಮಾಡುತ್ತಲೇ ಮುಂದರಿಯುವವು, ಅದರ ಪರಿಣಾಮ ವಾಗಿ ಜನರು, ನಿರ್ದೋಷಿಗಳನ್ನೊಳಗೊಂಡು ಶ್ರಮೆಪಡಲು ಮುಂದುವರಿಯುವರು.

## ದೇವರು ಯಾಕೆ ಮಧ್ಯದಲ್ಲಿ ಪ್ರವೇಶಿಸುವದಿಲ್ಲ?

ಈಗಲೇ ಹೇಳಿದಂಥದ್ದನ್ನು ಕೆಲವರು ಮಾತ್ರ ಒಪ್ಪಿಕೊಳ್ಳುವದಿಲ್ಲ. ನಿರಪರಾಧಿಗಳು ಶ್ರಮೆ ಪಡುತ್ತಾರೆ, ಆದರೆ ಅವರು ಕೊಡಲ್ಪಟ್ಟ ಕಾರಣಗಳಿಗಾಗಿ ಶ್ರಮೆ ಹೊಂದುತ್ತಾರೆ. ಆದರೆ ಆಗ ಈ ಪ್ರಶ್ನೆ ಬರುತ್ತದೆ: "ದೇವರು ಇದ್ದರೆ, ಆತನು ಶ್ರಮೆಪಡುವದನ್ನು ಯಾಕೆ

ತಡೆಗಟ್ಟಬಾರದು?" ದುಷ್ಟರು ಯಥಾರ್ಥರನ್ನು ತೊಂದರೆ ಪಡಿಸುವದರಿಂದ ಯಾಕೆ ಆತನು ದೂರವಿಡಬಾರದು? ಒಳ್ಳೇ ಜನರನ್ನು ತಪ್ಪುಗಳನ್ನು ಮಾಡುವದರಿಂದ ಮತ್ತು ನಿರಪರಾಧಿಗಳು ಇತರರ ತಪ್ಪುಗಳಿಂದ ತೊಂದರೆ ಪಡಿಸಲ್ಪಡುವದರಿಂದ ಯಾಕೆ ದೂರವಿಡಬಾರದು? ಸೃಷ್ಟಿಯ ಒತ್ತಡಗಳ ಮುಖಾಂತರ ಯಥಾರ್ಥತೆಯುಳ್ಳವರು ನೋವು ಹೊಂದದಂತೆ ವಿಶ್ವವನ್ನು ಆತನು ಯಾಕೆ ನಿಯಂತ್ರಿಸಬಾರದು? ಎರಡು ಸಾಧ್ಯವಾದ ಉತ್ತರಗಳನ್ನು ಯೋಚಿಸೋಣ.

*ದೇವರು ಮಾನವನ ಸ್ವಭಾವವನ್ನು ಗೌರವಿಸಬೇಕಾಗಿದ್ದರಿಂದ, ಆತನು ಮಧ್ಯೆ ಪ್ರವೇಶಿಸುವದಿಲ್ಲ.* ಮನುಷ್ಯನು ಒಬ್ಬ ಸ್ವತಂತ್ರ ನೈತಿಕ ಕಾರ್ಯಸ್ಥನಾಗಿದ್ದಾನೆ. ಅವನ ಕೃತಿಗಳು ಅವನಿಗೆ ಬಿಡಲ್ಪಟ್ಟವುಗಳಾಗಿವೆ; ಅವನ ಆಯ್ಕೆಗಳು ಮುಂಚಿತವಾಗಿಯೇ ನಿರ್ಧರಿಸಲ್ಪಟ್ಟಿರುವದಿಲ್ಲ. ತಪ್ಪು ಆಯ್ಕೆಗಳನ್ನು ಮಾಡಲು, ತನಗೆ ತೊಂದರೆ ಪಡಿಸಿ ಕೊಳ್ಳಲು ಮತ್ತು ಇತರರಿಗೆ ತೊಂದರೆ ಕೊಡಲು ಮನುಷ್ಯನು ಸ್ವತಂತ್ರನಾಗಿದ್ದಾನೆ. ದೇವರು ಮನುಷ್ಯನನ್ನು ಪೂರ್ಣ ಮಾನವನಾಗಿರಲು ಬಿಟ್ಟರೆ, ಆತನು ಅವನಿಗೆ ಆ ಸ್ವಾತಂತ್ರವನ್ನು ಕೊಡಬೇಕಾಗುತ್ತದೆ.

*ಮನುಷ್ಯನ ಸ್ವಂತ ಒಳಿತಿಗಾಗಿ* ಅಂಥ ಸ್ವಾತಂತ್ರವನ್ನು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ. ನೀವು ಯಂತ್ರಮಾನವರಾಗಿರಲು, ಕೈಗೊಂಬೆಯಾಗಿರಲು ಹೆಚ್ಚು ಬಯಸುತ್ತಿರೋ? *ಇತರರ ಒಳಿತಿಗಾಗಿ* ಆತನು ಸ್ವಾತಂತ್ರ್ಯವನ್ನು ಕೊಡುತ್ತಾನೆ. ನಮ್ಮ ಸ್ವಾತಂತ್ರ್ಯ ಅಂದರೆ ತ್ಯಾಗಮಾಡಲು, ಪ್ರೀತಿ ಮಾಡಲು ಮತ್ತು ಇತರರ ಸೇವೆ ಮಾಡಲು ಸ್ವತಂತ್ರರಾಗಿದ್ದೇವೆ. *ದೇವರ ಮಹಿಮೆಗಾಗಿಯೂ* ಆತನು ಈ ಸ್ವಾತಂತ್ರ್ಯವನ್ನು ಕೊಡುತ್ತಾನೆ. ತನ್ನನ್ನು ಮಹಿಮೆ ಪಡಿಸುವದಕ್ಕಾಗಿ ಆತನು ಮನುಷ್ಯನನ್ನು ಉಂಟುಮಾಡಿದನು. ಆದರೆ ಮನುಷ್ಯನಿಗೆ ಬೇರೆ ಪರ್ಯಾಯ ಇಲ್ಲದಿದ್ದರೆ, ಮನುಷ್ಯನು ತನ್ನ ಸೃಷ್ಟಿಕರ್ತನ ಸೇವೆ ಮಾಡುವದರಲ್ಲಿ ಯಾವ ಮಹಿಮೆಯೂ ಇರುವದಿಲ್ಲ.

*ವಿಶ್ವದ ಸ್ವಭಾವವನ್ನು ದೇವರು ಗೌರವಿಸಬೇಕಾಗಿದ್ದುದರಿಂದ ಆತನು ಮಧ್ಯೆ ಪ್ರವೇಶಿಸುವದಿಲ್ಲ.* ದೇವರು ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಯನ್ನು ಸುರಿಸುತ್ತಾನೆ (ಮತ್ತಾಯ 5:45). ಹೀಗೆ ದುಷ್ಟರು ನೀತಿವಂತರಂತೆ ಸೃಷ್ಟಿಯಿಂದ ಲಾಭಪಡೆಯುತ್ತಾರೆ ಮತ್ತು ನೀತಿವಂತರು, ದುಷ್ಟರು ಸೃಷ್ಟಿಯ ಒತ್ತಡಗಳಿಂದ ಶ್ರಮೆಪಡುವಂತೆ, ಶ್ರಮೆಪಡುತ್ತಾರೆ.

ಸೃಷ್ಟಿಯು ಆಶೀರ್ವಾದಿಸುವುದನ್ನೂ ಶಪಿಸುವದನ್ನೂ ಎರಡನ್ನೂ ಒಂದೇ ರೀತಿಯಾಗಿ ಮಾಡುವಂತೆ ದೇವರು ಯಾಕೆ ಬಿಡುತ್ತಾನೆ? ಮೊದಲನೆಯದು, ನಿಯಮದಿಂದ ಆಳಲ್ಪಡುವ ವಿಶ್ವದಲ್ಲಿ ನಾವು ಜೀವಿಸುತ್ತಿದ್ದೇವೆ. ನೀತಿವಂತರಿಗೆ ಉಪಕಾರ ಮಾಡಲು, ದೇವರು ತಾನೇ ವಿಶ್ವದ ನಿಯಮಗಳನ್ನು ತಳ್ಳಿಹಾಕಿದರೆ, ಪರಿಣಾಮವಾಗಿ ಗಲಿಬಿಲಿ ಉಂಟಾಗುತ್ತದೆ. ನಮಗೆ ನಿಯಮದಿಂದ ಅಲ್ಲ, ಆದರೆ ಭ್ರಾಂತಿಯಿಂದ ಆಳಲ್ಪಡುವ ವಿಶ್ವವಿರುತ್ತದೆ. ನಾವು ಅದನ್ನು ಮೆಚ್ಚಿಕೊಳ್ಳುತ್ತೇವೆಯೋ?

ಎರಡನೆಯದು, ದೇವರು ಸೃಷ್ಟಿಯನ್ನು ಆಶೀರ್ವದಿಸುವದಕ್ಕೂ ಶಪಿಸುವದಕ್ಕೂ ಎರಡನ್ನೂ ಒಂದೇ ರೀತಿಯಲ್ಲಿ ಬಿಡುತ್ತಾನೆ, ಯಾಕಂದರೆ ಕೆಲವರಿಗೆ ಆತನು ನೋವನ್ನು ತಡೆಯುವುದು ಅನೇಕರಿಗೆ ನೋವನ್ನು ತರಬಹುದು. ಅದೇ ನೆರೆಹಾವಳಿಯು ನದಿಯ ಮೇಲ್ಗಡೆ ಇರುವವರಿಗೆ ಮರಣವನ್ನು ತರಲು ಕಾರಣವಾಗಬಹುದಾದಂಥದ್ದು, ನದಿಯ ಕೆಳಗಡೆ ಇರುವ ಸಾವಿರಾರು ಜನರಿಗೆ ಆಹಾರ ಒದಗಿಸಲು ಬೆಳೆಗಳಿಗೆ ನೀರನ್ನು ಒದಗಿಸುವ ಸಾಧ್ಯತೆಯಿದೆ. ದೇವರು ಕೆಲವರನ್ನು ನೆರೆಹಾವಳಿಯಿಂದ ರಕ್ಷಿಸಿದರೆ,

ಪರಿಣಾಮವಾಗಿ ಬರುವ ಬರಗಾಲದಲ್ಲಿ ಸಾವಿರಾರು ಜನರು ಆಹಾರವಿಲ್ಲದೇ ಹಸಿವೆಯಿಂದಿರುವರು.

ಮೂರನೆಯದು, ದೇವರು, ಸೃಷ್ಟಿಯು ಆಶೀರ್ವಾದವನ್ನು ಮತ್ತು ಶಾಪವನ್ನು ಎರಡನ್ನೂ ಒಂದೇ ರೀತಿಯಲ್ಲಿ ಕೊಡಲು ಬಿಡುವನು ಯಾಕಂದರೆ ನೀತಿವಂತರನ್ನು ಭೌತಿಕವಾಗಿ ಮೆಚ್ಚಿಕೊಳ್ಳುವುದು ಅನೇಕರು ತಪ್ಪಾದ ಉದ್ದೇಶಗಳಿಂದ ಆತನ ಸೇವೆ ಮಾಡುವದಕ್ಕೆ ಕಾರಣವಾಗುವುದು. ಕೇವಲ ದುಷ್ಟರು ಮಾತ್ರವೇ ಶ್ರಮೆಹೊಂದಿದರೆ, ಹಾಗೂ ನೀತಿವಂತರು ಯಾವಾಗಲೂ ಸಮೃದ್ಧಿಯಿಂದ ಇದ್ದರೆ, ಯಾರು ಕರ್ತನ ಸೇವೆಮಾಡುವರು? ಪ್ರತಿಯೊಬ್ಬರೂ ಸೇವೆ ಮಾಡುವ ಸಾಧ್ಯತೆಯಿದೆ! ಆದರೆ ಯಾಕೆ? "ರೊಟ್ಟಿ ತುಂಡುಗಳು ಮತ್ತು ಮೀನುಗಳಿಗಾಗಿ" ಮಾತ್ರವೇ. ಸರಿಯಾದ ಉದ್ದೇಶದಿಂದ ಜನರು ತನ್ನ ಸೇವೆ ಮಾಡಬೇಕು ಮತ್ತು ತನ್ನನ್ನು ಮಹಿಮೆಪಡಿಸಬೇಕು ಎಂದು ದೇವರು ಬಯಸುತ್ತಾನೆ.

ದೇವರು ತಾನು ಸೃಷ್ಟಿಸಿದ ವಿಶ್ವದ ಸ್ವಭಾವವನ್ನು ಗೌರವಿಸಬೇಕಾಗುತ್ತದೆ - ಆತನಿಂದ ನೇಮಿಸಲ್ಪಟ್ಟ ನಿಯಮಗಳಿಂದ ಆಳಲ್ಪಡುವ ವಿಶ್ವವು ಕೇವಲ ಯಥಾರ್ಥರನ್ನು ರಕ್ಷಿಸುವದಕ್ಕಾಗಿ ಅತಿಕ್ರಮಿಸಲ್ಪಡುವದಿಲ್ಲ.

ದೇವರು ಅಂಥ ವಿಶ್ವವನ್ನು ಯಾಕೆ ಮಾಡಿದನು? ಯಾವುದೇ ನೈಸರ್ಗಿಕ ಅವಘಡಗಳು ಸಂಭವಿಸದೇ ಇರುವಂಥ ಜಗತ್ತನ್ನು ಆತನು ಯಾಕೆ ಮಾಡಲಿಲ್ಲ? ಆ ಪ್ರಶ್ನೆಗೆ ಹಲವಾರು ಉತ್ತರಗಳಿರುತ್ತವೆ, ಆದರೆ ಒಂದು ಇದಾಗಿದೆ: "ಒಂದು ವಿಶ್ವವನ್ನು ಸೃಷ್ಟಿಸುವುದು ಹೇಗೆ ಎಂದು ನೀನು ಅಷ್ಟನ್ನು ತಿಳಿದಿದ್ದರೆ, ನಿನ್ನ ಸ್ವಂತವಾದ ಒಂದನ್ನು ನೀನು ಯಾಕೆ ಸೃಷ್ಟಿಸಬಾರದು?" ದೇವರು ಮಾಡಬಹುದಾದದ್ದನ್ನು ನಾವು ಮಾಡುವವರೆಗೆ, ಮತ್ತು ದೇವರು ತಿಳಿಯಬಹುದಾದದ್ದನ್ನು ನಾವು ತಿಳಿಯುವವರೆಗೆ, ದೇವರು ಮಾಡಿದ್ದನ್ನು ನಾವು ಟೀಕಿಸಬಾರದು.

"ದೇವರು ಯಾಕೆ ಮಧ್ಯೆ ಪ್ರವೇಶಿಸಬಾರದು?" ಎಂಬ ಪ್ರಶ್ನೆಗೆ ಇನ್ನೊಂದು ಉತ್ತರವು ಇದಾಗಿದೆ: *ದೇವರು ಮಧ್ಯೆ ಪ್ರವೇಶಿಸಿದ್ದಾನೆ, ಮತ್ತು ದೇವರು ಮಧ್ಯೆ ಪ್ರವೇಶಿ ಸುತ್ತಾನೆ!*

ಒಬ್ಬರನ್ನೊಬ್ಬರು ಪ್ರೀತಿಸುವದನ್ನು ಜನರಿಗೆ ಭೋಧಿಸುವದಕ್ಕಾಗಿ ತನ್ನ ಕುಮಾರನನ್ನು ಕಳಿಹಿಸುವದರಿಂದ ದೇವರು ಮಧ್ಯೆ ಪ್ರವೇಶಿಸಿದ್ದಾನೆ. ಕ್ರಿಸ್ತನ ಬೋಧ ನೆಯನ್ನು ಅನುಸರಿಸುವವರ ಮುಖಾಂತರ ಕಾರ್ಯಮಾಡುವದರಿಂದ ಮಾನವ ಕುಲದ ನೋವುಗಳನ್ನು ಗುಣಪಡಿಸಲು ಆತನು ಸಹಾಯ ಮಾಡುತ್ತಾನೆ. ದೇವರು ತನ್ನ ಮಕ್ಕಳ ಪ್ರಾರ್ಥನೆಗಳ ಕಾರಣದಿಂದ ಮಧ್ಯೆ ಪ್ರವೇಶಿಸುತ್ತಾನೆ. ಹಿಜ್ಕೀಯನನ್ನು ಜ್ಞಾಪಿಸಿಕೊಳ್ಳಿರಿ, ಅವನು ತಾನು ಸಾಯಲಿಕ್ಕಿದೇನೆ ಎಂದು ತಿಳಿದುಕೊಂಡಾಗ, ಅವನು ದೇವರಿಗೆ ಪ್ರಾರ್ಥಿಸಿದನು, ಮತ್ತು ದೇವರು ಅವನಿಗೆ ಇನ್ನೂ ಹದಿನೈದು ವರ್ಷಗಳ ಜೀವನ ಕೊಟ್ಟನು (2 ಅರಸುಗಳು 20:1-6). ನಾವು ಪ್ರಾರ್ಥಿಸುವಾಗ, ಹೊಸ ಒಡಂಬಡಿಕೆಯ ಸಮಯಗಳಲ್ಲಿ ಆತನು ಮಾಡಿದಂತೆ, ದೇವರು ಇಂದು ಅದ್ಭುತಗಳೊಂದಿಗೆ ಉತ್ತರ ಕೊಡುವದಿಲ್ಲ. ಆದರೆ ಆತನು ತನಗೆ ಪ್ರಾರ್ಥಿಸುವವರಿಗೆ ಸಹಾಯ ಮಾಡುತ್ತಾನೆ. ನಮ್ಮ ಪ್ರಾರ್ಥನೆಗಳಿಗೆ ಆತನು ಎಷ್ಟು ಸಲ ಉತ್ತರ ಕೊಟ್ಟಿದ್ದಾನೆ ಎಂಬುದನ್ನು ನಿತ್ಯತ್ವವು ಮಾತ್ರವೇ ಪ್ರಕಟಿಸುವುದು. ದೇವರು ವಿಶ್ವವನ್ನು ತನ್ನಷ್ಟಕ್ಕೆ ತಾನೇ ಓಡುವಂತೆ ಬಿಟ್ಟಿರುವದಿಲ್ಲ ಅದು ಇನ್ನೂ ಕ್ರಿಸ್ತನಿಂದ ಎತ್ತಿ ಹಿಡಿಯಲ್ಪಟ್ಟಿದೆ. ದೇವರು ಇನ್ನೂ ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ!

ದೇವರು ಪ್ರತಿಯೊಂದರ ಪ್ರಾರ್ಥನೆಗೆ ಯಾಕೆ ಉತ್ತರ ಕೊಡುವದಿಲ್ಲ. ಯಾಕಂದರೆ

ಅದು ಯಾವಾಗಲೂ ಆತನ ಚಿತ್ತವಾಗಿರುವದಿಲ್ಲ. ಪ್ರಿಯನಾದವನು ಗುಣ ಹೊಂದದೇ ಇರುವಂಥದ್ದು ಕೆಲವು ಸಲ ಆತನ ಉದ್ದೇಶಗಳಿಗೆ ಅತ್ಯುತ್ತಮವಾದದ್ದಾಗಿರಬಹುದು. ಆದುದರಿಂದ, ಯೇಸುವು ಪ್ರಾರ್ಥಿಸಿದಂತೆ "ನನ್ನ ಚಿತ್ತವಲ್ಲ, ನಿನ್ನ ಚಿತ್ತವೇ ನೆರವೇರಲಿ" ಎಂದು ಪ್ರಾರ್ಥಿಸುತ್ತೇವೆ. ತನ್ನ ಉದ್ದೇಶಗಳನ್ನು ಪೂರ್ತಿಗೊಳಿಸುವದರಲ್ಲಿ ಯಾವುದು ಉತ್ತಮವಾದದ್ದೆಂದು ದೇವರು ತಿಳಿದು ಅದನ್ನು ಮಾಡುವನೆಂದು ನಂಬುತ್ತೇವೆ.

ಆದರೆ ಮೂರನೆಯ ಪ್ರಶ್ನೆಯು ನಮ್ಮ ತುಟಿಗಳಿಗೆ ಬರುತ್ತದೆ: ಅಂಥ ಅರ್ಥಹೀನ ಶ್ರಮೆಯು ನಮ್ಮನ್ನು ಸುತ್ತಿರುವಾಗ, ಮತ್ತು ಕೆಲವು ಸಲ ದೇವರು ಗಮನಿಸುವದಿಲ್ಲ ಎಂದು ತೋರುವಾಗ, ನಾವು ಕೇಳುತ್ತೇವೆ ...

## ನಾವು ಯಾಕೆ ದೇವರಲ್ಲಿ ನಂಬಿಕೆ ಇಡಬೇಕು?

ನಾವು ದೇವರಲ್ಲಿ ನಂಬಿಕೆಯಿಡಬೇಕು *ಯಾಕಂದರೆ ಬೇರೆ ಪರ್ಯಾಯ ವಿರುವದಿಲ್ಲ!*

*ದೇವರಿಲ್ಲದೇ ಜಗತ್ತಿನಲ್ಲಿರುವ ಎಲ್ಲಾ ಶ್ರಮೆಗೆ ತೃಪ್ತಿಕರವಾದ ವಿವರಣೆ ಯಿರುವದಿಲ್ಲ.* ಶ್ರಮೆಯು ಸೃಷ್ಟಿಯ ಕುರುಡು ಒತ್ತಡದ, ಕಾಡಿನ ನಿಯಮದ, ಅರ್ಥ ಹೀನತೆಯು ನಿರೀಕ್ಷಿಸಲ್ಪಡುವಲ್ಲಿಯ ಅಸ್ತಿತ್ವದ ಪರಿಣಾಮವಾಗಿದೆ ಎಂದು ನಾಸ್ತಿಕನು ನಂಬತಕ್ಕದ್ದು. ಆದರೆ ಈ ವಿವರಣೆಯು ತೃಪ್ತಿಗೊಳಿಸುವುದಿಲ್ಲ! ದೇವರ ವಿಚಾರವನ್ನು ತಿರಸ್ಕರಿಸುವವರು ಸಹ, ಅರ್ಥಕ್ಕಾಗಿ, ಉತ್ತರಗಳನ್ನು ನೋಡುತ್ತಿರುವರು.

*ಇದಲ್ಲದೇ, ದೇವರಿಲ್ಲದೇ ಲೋಕದಲ್ಲಿ ಆಶೀರ್ವಾದಗಳಿಗಾಗಿ ಯಾವುದೇ ವಿವರಣೆ ಇರುವದಿಲ್ಲ.* ವರ್ತಮಾನ ಪತ್ರಿಕೇಯ ಲೇಖಕ ಸಿಡ್ನಿ ಹ್ಯಾರಿಸ್ ಈ ರೀತಿಯಲ್ಲಿ ಹೇಳಿದ್ದಾರೆ:

> ಉದ್ದೇಶ ಭರಿತ ದೇವರ ವಿಚಾರವನ್ನು ಆಕ್ಷೇಪಿಸುವವರ ಮೆಚ್ಚಿಕೆಯ ವಾದವು ಜಗತ್ತಿನಲ್ಲಿ ಎಲ್ಲಾ ದುಷ್ಟತನವನ್ನು ತೋರಿಸುವುದಾಗಿದೆ. "ಔದಾರ್ಯವುಳ್ಳ ದೇವರು ಹೇಗೆ ಅಷ್ಟು ಬಹಳವಾಗಿ ಕೆಟ್ಟತನವು ಅಸ್ತಿತ್ವದಲ್ಲಿರುವಂತೆ ಹಾಗೂ ಬೆಳೆಯುವಂತೆ ಮಾಡುವನು?" ಎಂದು ಅವರು ಕೇಳುವರು.
>
> ಇದರ ಅಂತರ್ಯವನ್ನು ಬಹಿರಂಗ ಪಡಿಸಿ, "ಒಳ್ಳೆಯದರ ಸಮಸ್ಯೆ" ಎಂದು ನಾನು ಕರೆಯುವದರೊಂದಿಗೆ ಈ ಜನರನ್ನು ಎದುರಿಸುತ್ತ ಈ ಪ್ರಶ್ನೆಗೆ ಉತ್ತರ ಕೊಡುತ್ತ ಬಂದಿದ್ದೇನೆ. ಲೋಕದಲ್ಲಿರುವ ಬಹಳವಾದ ಒಳ್ಳೆಯ ತನಕ್ಕಾಗಿ ಅವರು ಹೇಗೆ ಲೆಕ್ಕಾ ಕೊಡುವರು? ಮನುಷ್ಯನು ... ಪ್ರೀತಿಯ, ಸ್ವಾರ್ಥತೆಯಿಲ್ಲದ; ಮತ್ತು ಸ್ವತ್ಯಾಗದ ಉನ್ನತ ಮಟ್ಟಗಳಿಗೆ ಏರಿರುವುದು ಹೇಗೆ? ಅವನು ತನ್ನ ಸ್ನೇಹಿತನಿಗಾಗಿ ತನ್ನ ಪ್ರಾಣವನ್ನು ಯಾಕೆ ಕೊಡಬೇಕು? ಇತರರಿಗಾಗಿ ಅವನು ತನ್ನ ಸುಖವನ್ನು ಯಾಕೆ ತ್ಯಾಗಮಾಡಬೇಕು? ತಮಗಿಂತ ಹೆಚ್ಚು ದೊಡ್ಡವಾದ ಒಂದು ವಿಚಾರಕ್ಕಾಗಿ ಸಂತೋಷದಿಂದ ಮರಣ ಹೊಂದಿದ ಹತಸಾಕ್ಷಿಗಳಿಂದ ಹಾಗೂ ಶೂರರಿಂದ ಮಾನವತೆಯ ಚರಿತ್ರೆಯು ಯಾಕೆ ಪ್ರಕಾಶಗೊಳಿಸಲ್ಪಟ್ಟಿದೆ?
>
> ಮಾನವ ಕುಲದ ಸದ್ಗುಣಗಳನ್ನು ಮತ್ತು ಅದರ ದುರ್ಗುಣಗಳನ್ನು ಖಂಡಿಸುವದನ್ನು ನಾವು ಸುಮ್ಮನೇ ತೆಗೆದುಕೊಳ್ಳುತ್ತೇವೆ. ಆದರೆ ಚೇಳಿನ ಇಲ್ಲವೇ ಜೇಡರ ಹುಳದ ಸದ್ಗುಣಗಳನ್ನು ದಾಟಿ ಮಾನವ ಕುಲಕ್ಕೆ ಯಾವುದೇ ಸದ್ಗುಣವು ಯಾಕೆ ಬೇಕು? ಮನುಷ್ಯನ ಅಪೂರ್ಣತೆಗಳನ್ನು ನಿಂದಿಸುವದಕ್ಕಿಂತ ಹೆಚ್ಚಾಗಿ ದೇವರ ಒಳ್ಳೆಯತನವನ್ನು ಕುರಿತು ಆನಂದಿಸುವದಕ್ಕಾಗಿ ನಮಗೆ ಹೆಚ್ಚು ಕಾರಣಗಳಿರುತ್ತವೆ.

ಅದು ಸತ್ಯವಾಗಿಲ್ಲವೇ? ನಾವು ಆಶ್ಚರ್ಯಪಡುವಂತೆ ಬಹಳವಾದ ಒಳ್ಳೆಯದು ಜಗತ್ತಿನಲ್ಲಿ ಇರುವದಿಲ್ಲವೇ? ಶ್ರಮೆಪಡುವದನ್ನು ಗುರುತಿಸಲಿಕ್ಕೆ ನಮ್ಮನ್ನು ಶಕ್ತರನ್ನಾಗಿ ಮಾಡುವ ಒಂದೇ ಒಂದು ಸಂಗತಿಯು ನಾವು ಅನೇಕ ಆಶೀರ್ವಾದಗಳನ್ನು ಅನುಭವಿಸುವುದು ಆಗಿದೆ. ನೀನು ಎಂದೂ ಬೆಳಕನ್ನು ತಿಳಿಯದೇ ಇದ್ದರೆ, ನೀನು ಕತ್ತಲೆಯನ್ನು ಕತ್ತಲೆಯೆಂದು ಗುರುತಿಸಲಾರಿ. ನೀನು ಯಾವಾಗಲೂ ನೋವನ್ನೇ ಅನುಭವಿಸಿದ್ದರೆ, ನೋವು ನೋವಾಗಿರುವುದೆಂದು ನೀನು ತಿಳಿಯಲಾರಿ. ನೀನು ಆರೋಗ್ಯವನ್ನು ಎಂದೂ ಅನುಭವಿಸಿರದಿದ್ದರೆ ನೀನು ರೋಗಿಯಾಗಿರುವಿ ಎಂಬುದನ್ನು ನೀನು ತಿಳಿಯಲಾರಿ. ಬಹಳ ಸಮೃದ್ಧಿಯಾಗಿ ನಾವು ಆಶೀರ್ವದಿಸಲ್ಪಟ್ಟದ್ದರಿಂದಲೇ ನಾವು ಶ್ರಮೆಯ ಬಗ್ಗೆ ದೂರು ಹೇಳುತ್ತೇವೆ.

ಈ ಎಲ್ಲಾ ಆಶೀರ್ವಾದಗಳು ಎಲ್ಲಿಂದ ಬಂದವು? ಎಂಬುದು ಪ್ರಶ್ನೆ. ಅರ್ಥವಿಲ್ಲದ ವಿಶ್ವದಿಂದಲೋ, ಆಕಸ್ಮಿಕದಿಂದಲೋ? ಹಾಗಿರುವದಿಲ್ಲ! ಅವು ದೇವರಿಂದ ಬಂದಿರಬೇಕು! ಕ್ರೈಸ್ತರಿಗಿಂತ - ಹೆಚ್ಚಾಗಿ ನಾಸ್ತಿಕನಿಗೆ ಪರಿಹರಿಸಲು ಹೆಚ್ಚು ಕಠಿಣವಾದ ಸಮಸ್ಯೆ ಇರುವುದೆಂದು ನಾನು ಒಪ್ಪಿಕೊಳ್ಳುತ್ತೇನೆ. *"ಒಬ್ಬ ದೇವರು ಇದ್ದರೆ, ಯಾಕೆ ಅಷ್ಟು ಶ್ರಮೆಯಿದೆ?"* ಎಂದು ಅವನು ನಮಗೆ ಕೇಳುವನು. *"ದೇವರು ಇಲ್ಲದಿದ್ದರೆ, ಆಗ ಯಾಕೆ ಅಷ್ಟು ಅನೇಕ ಆಶೀರ್ವಾದಗಳು ಇರುತ್ತವೆ? ನಿಜವಾಗಿ, ಜಗತ್ತಿನಲ್ಲಿ ಯಾವುದೇ ಒಳ್ಳೆಯದಾದರೂ ಯಾಕೆ ಇರುತ್ತದೆ?" ಎಂದು ನಾವು* ಅವನನ್ನು ಪ್ರಶ್ನಿಸುತ್ತೇವೆ.

ನಾವು ವಿಚಾರಿಸುತ್ತಿರುವ ಪ್ರಶ್ನೆಗೆ ಯಾವಾಗಲೂ ಕ್ರೈಸ್ತನಿಗೆ ಒಂದು ಅಂತಿಮ ಉತ್ತರವಿರುತ್ತದೆ. ಈಗ ನಾವು ತಿಳಿದಿರಲಿಕ್ಕಿಲ್ಲ, ಆದರೆ ಅಂತಿಮವಾಗಿ ಅದನ್ನು ತಿಳಿದುಕೊಳ್ಳುತ್ತೇವೆ. *ಒಂದು ದಿನ ನಾವು ಅರ್ಥಮಾಡಿಕೊಳ್ಳುತ್ತೇವೆ.* ದೇವರು ಅತ್ಯುತ್ತಮವಾಗಿ ತಿಳಿದುಕೊಂಡಿರುವನೆಂದು ನಾವು ನಂಬುತ್ತೇವೆ. ತನ್ನ ಕಾರಣದ ಅಂತಿಮ ಬಳಿತಿಗಾಗಿ ಎಲ್ಲಾ ಸಂಗತಿಗಳನ್ನು ಒಂದುಗೂಡಿಸಿ ಆತನು ಕಾರ್ಯಮಾಡುತ್ತಿರುವನೆಂದು ನಂಬುತ್ತೇವೆ (ರೋಮಾಪುರ 8:28). ನಂಬಿಕೆಯ ಮುಖಾಂತರ ಜೀವನದ ಒಳ್ಳೆಯದನ್ನೂ ಕೆಟ್ಟದನ್ನೂ ಸಹಿಸಲು ನಾವು ಶಕ್ತರಾಗಿದ್ದೇವೆ.

## ಮುಕ್ತಾಯ

ಕ್ರಿಸ್ತನ ವಿಶ್ವಾಸವು, ಜೀವನದ ಶೋಧನೆಗಳ, ನಿರಾಶೆಗಳ ಮತ್ತು ಶ್ರಮೆಯ ಎದುರಿನಲ್ಲಿ ಅವನನ್ನು ಹೆಚ್ಚು ಬಲವುಳ್ಳವನನ್ನಾಗಿ ಮಾಡಿದೆ. ವಿಶ್ವಾಸದ ನಿನ್ನ ಕೊರತೆಯು ನಿನಗಾಗಿ ಏನು ಮಾಡಿದೆ? ಸಂಶಯವು ನಿನ್ನನ್ನು ಕಾಪಾಡಿದೆಯೇ? ಅಪನಂಬಿಕೆಯು ಜೀವನದ ತೊಂದರೆಯ ಮಧ್ಯದಲ್ಲಿ ಹೆಚ್ಚು ಸಮೃದ್ಧಿಯಿಂದಲೂ ಜಯಶಾಲಿಯಾಗಿಯೂ ಜೀವಿಸುಲು ನಿನ್ನನ್ನು ಸಮರ್ಥನನ್ನಾಗಿ ಮಾಡಿದೆಯೇ?

ಬಿಟ್ಟುಕೊಡಲು, ಒಪ್ಪಿಸಿಕೊಳ್ಳಲು ಮತ್ತು ದೇವರಿಗೆ ನಿನ್ನನ್ನು ಕೊಡಲು ನಿನಗಾಗಿ ಸಮಯವು ಇದಾಗಿರುವದಿಲ್ಲವೋ? ನಂಬಿಕೆಯಲ್ಲಿ ಮತ್ತು ವಿಧೇಯತೆಯಲ್ಲಿ ನಿನ್ನನ್ನು ಆತನಿಗೆ ಒಪ್ಪಿಸಿಕೊಡು; ಆತನು ನಿನಗಾಗಿ ಚಿಂತಿಸುವನು ಎಲ್ಲವುಗಳೂ ಒಳ್ಳೆ ಯದಕ್ಕಾಗಿ ಕಾರ್ಯಮಾಡುವವೆಂಬ ಭರವಸೆ ನಿನಗಿರುವುದು ... ನೀನು ಯಾವ ಶ್ರಮೆ ಅನುಭವಿಸಿದರೂ, ನಿತ್ಯಜೀವನದಲ್ಲಿ ದೇವರೊಂದಿಗೆ ವಾಸಸ್ಥಾನ ಹೊಂದಿಕೊಳ್ಳುವಿ ... ಮತ್ತು ಆತನು ಒಂದು ದಿನ ಎಲ್ಲವನ್ನೂ ಸ್ಪಷ್ಟಪಡಿಸುವನು!

© 2009 Truth for Today